ಓಎಸ್ ನಂಃ 754-14
ಪಿಡಬ್ಲ್ಯೂ ಃ 1
ದಿಃ05-12-2015ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.
ಪಾಟೀ ಸವಾಲುಃ ಶ್ರೀ ಸಿ ಬಿ ಎಚ್ ವಕೀಲರಿಂದ.

ದಾವಾ ಆಸ್ತಿ ನನ್ನ ಅಜ್ಜಿಗೆ ಮಂಜುರಾಗಿರುತ್ತದೆ, ಸದರಿ ಯಲ್ಲಮ್ಮ ನನ್ನ ತಂದೆಯ ತಾಯಿ, ದಾವಾ ಪತ್ರದಲ್ಲಿ ದಾವಾ ಆಸ್ತಿ ನನ್ನ ಅಜ್ಜಿಗೆ ಮಂಜುರಾಗಿತ್ತು ಎಂದು ತಿಳಿಸಿಲ್ಲ ಅಂದರೆ ಸರಿಯಲ್ಲ ಆ ಬಗ್ಗೆ ತಿಳಿಸಿರುತ್ತೇವೆ, ತಹಸಿಲ್ದಾರ್ ಕಚೇರಿಯಿಂದ ಗ್ರಾಂಟ್ ಆಗಿರುತ್ತದೆ ಗ್ರಾಂಟ್ ಆದ ಬಗ್ಗೆ ತೋರಿಸಲು ದಾಖಲೆ ಇರುತ್ತದೆ, ಗ್ರಾಂಟ್ ಆದೇಶದ ಪ್ರತಿ ಹಾಜರು ಪಡಿಸಿರುತ್ತೇನೆ, ದಾವಾ ಆಸ್ತಿ ನನ್ನ ಅಜ್ಜಿ ಹೆಸರಿಗೆ ತಹಶೀಲ್ದಾರ್ ಕಚೇರಿಯಿಂದ ಮಂಜುರಾತಿ ಆಗಿಲ್ಲ ಅಂದರೆ ಸರಿಯಲ್ಲ, ನನ್ನ ಅಜ್ಜಿ ಯಲ್ಲಮ್ಮ ಸರ್ವೆ ನಂಃ 69-2ರ ಜಮೀನನ್ನು ಮುದ್ದರಂಗಯ್ಯ ಶೆಟ್ಟಿ ಮತ್ತು ಭದ್ರಯ್ಯರವರಿಂದ ಖರೀದಿಸಿರುತ್ತಾರೆ ಸಾಕ್ಷಿಗೆ ಕ್ರಯಪತ್ರದ ಪ್ರತಿಯನ್ನು ತೋರಿಸಿದಾಗ ಹೌದು ಎಂದು ಒಪ್ಪಿರುತ್ತಾರೆ ಸದರಿ ಕ್ರಯಪತ್ರದ ಪ್ರತಿಯನ್ನು ನಿಡಿ 1 ಎಂದು ಗುರುತಿಸಲಾಯಿತು, ನಿಡಿ 1 ಕ್ರಯಪತ್ರದಲ್ಲಿ ಕಂಡ ಆಸ್ತಿಗೂ ಈ ಕೇಸಿನ ದಾವಾ ಆಸ್ತಿಗೂ ಯಾವುದೇ ಸಂಬಂಧ ಇರುವುದಿಲ್ಲ,
ನಿಡಿ 1ರ ಪ್ರಕಾರ ನನ್ನ ಅಜ್ಜಿ 1 ಎಕರೆ 20 ಗುಂಟೆ ಪ್ರದೇಶವನ್ನು ಖರೀದಿಸಿದ್ದರು, ಅದರ ಚೆಕ್ಕು ಬಂದಿ ಪೂರ್ವಕ್ಕೆ ಮತ್ತು ಉತ್ತರಕ್ಕೆ ಅದೇ ಸರ್ವೆ ನಂಬರ್‌ನ ಪೈಕಿ ಕ್ರಯಕ್ಕೆ ಕೊಟ್ಟವರು ಉಳಿಸಿಕೊಂಡಿರುವ ಜಮೀನು ಅಂದರೆ ಸರಿ, ಪಶ್ಚಿಮಕ್ಕೆ ಮಾಗಡಿಯಿಂದ ಕುಣಿಗಲ್ ಹೋಗುವ ರಸ್ತೆ ಅಂದರೆ ಸರಿ, ದಕ್ಷಿಣಕ್ಕೆ ಮಾಗಡಿಯಿಂದ ಹುಲಿಯೂರುದುರ್ಗಕ್ಕೆ ಹೋಗುವ ರಸ್ತೆ ಇದೆ ಅಂದರೆ ಸರಿ, ನನ್ನ ಅಜ್ಜಿ ಹೆಸರಿಗೆ ಮಂಜೂರಾಗಿರುವ ಜಮೀನು ಹಾಗೂ ನಿಡಿ 1ರಲ್ಲಿ ಕಂಡ ಜಮೀನು ಒಂದಕ್ಕೊಂದು ಹೊಂದಿಕೊಂಡಂತೆ ಇರುತ್ತದೆ, ನನ್ನ ಅಜ್ಜಿ ಬದುಕಿದ್ದಾಗಲೇ ನಿಡಿ1ರ ಆಸ್ತಿಯನ್ನು ಹಾಗೂ ಇತರೆ ಆಸ್ತಿಗಳನ್ನು ಅವರ ಐದು ಜನ ಮಕ್ಕಳು ವಿಭಾಗ ಮಾಡಿಕೊಂಡಿರುತ್ತಾರೆ, ಸದರಿ ವಿಭಾಗದಲ್ಲಿ ನಿಡಿ 1ರ ಆಸ್ತಿ ನನ್ನ ತಂದೆ ರಾಮಾಂಜಿನೇಯರವರ ಭಾಗಕ್ಕೆ ಬಂದಿರುತ್ತದೆ, ವಿಭಾಗ ಪತ್ರ ಹಾಜರು ಪಡಿಸಿರುತ್ತೇನೆ, ವಿಭಾಗ ಪತ್ರದ ಚೆಕ್ಕು ಬಂದಿಯಲ್ಲಿ ಪೂರ್ವದ ದಿಕ್ಕಿನ ಚೆಕ್ಕು ಬಂದಿ ರಂಗಯ್ಯನ ಜಮೀನು ಎಂದು ಬರೆದಿರುತ್ತದೆ ಪಶ್ಚಿಮಕ್ಕೆ ಭದ್ರಯ್ಯನ ಜಮೀನು ಎಂದು ಬರೆದಿರುತ್ತದೆ, ಪುನಃ ಹೇಳುತ್ತೇನೆ ವಿಭಾಗ ಪತ್ರದಲ್ಲಿ 2 ಎಕರೆ ಎಂದು ಮಾತ್ರ ಬರೆದಿರುತ್ತದೆ ಚೆಕ್ಕು ಬಂದಿ ಬರೆದಿರುವುದಿಲ್ಲ, ನನ್ನ ಅಜ್ಜಿ ಹೆಸರಿಗೆ ಮಂಜುರಾಗಿರುವ ಜಮೀನಿನ ಚೆಕ್ಕು ಬಂದಿಯನ್ನು ವಿಭಾಗ ಪತ್ರದಲ್ಲಿ ಬರೆದಿರುವುದಿಲ್ಲ, ನನ್ನ ಅಜ್ಜಿ ಹೆಸರಿಗೆ ಮಂಜೂರು ಮಾಡಿಕೊಡಲು ಅಲ್ಲಿ ಯಾವುದೇ ಸರ್ಕಾರಿ ಜಾಗ ಇರಲಿಲ್ಲ ಅಂದರೆ ಸರಿಯಲ್ಲ, ಸರ್ಕಾರಿ ಜಮೀನು ಇಲ್ಲದ ಕಾರಣದಿಂದಲೇ ವಿಭಾಗ ಪತ್ರದಲ್ಲಿ ಸರ್ಕಾರಿ ಜಮೀನಿನ ಬಗ್ಗೆ ಬರೆದಿಲ್ಲ ಅಂದರೆ ಸರಿಯಲ್ಲ, ನನ್ನ ಅಜ್ಜಿ ಸೇರಿಗೆ ಯಾವುದೇ ಜಮೀನು ಸರ್ಕಾರದಿಂದ ಮಂಜೂರಾತಿ ಆಗಿಲ್ಲ ಅಂದರೆ ಸರಿಯಲ್ಲ, ನನ್ನ ಅಜ್ಜಿ ಹೆಸರಿಗೆ ಸರ್ಕಾರದಿಂದ

ಅಂದರೆ ತಾಲ್ಲೂಕು ಕಚೇರಿಯಿಂದ ಎಂದು ತಿಳಿಸಿರುತ್ತೇನೆ, ನನ್ನ ಅಜ್ಜಿ ಹೆಸರಿಗೆ ಮಂಜೂರಾದ ಬಗ್ಗೆ ತೋರಿಸಲು ದಾಖಲೆ ಹಾಜರು ಪಡಿಸಿಲ್ಲ ಅಂದರೆ ಸರಿಯಲ್ಲ, ವಿಭಾಗ ಪತ್ರದಲ್ಲಿ ಚೆಕ್ಕು ಬಂದಿ ಬರೆದಿದ್ದರು ಸಹ ಬರೆದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ, ವಿಭಾಗದಲ್ಲಿ ಬಂದಿದಂತಹ ಆಸ್ತಿಯನ್ನು ನನ್ನ ತಂದೆ ಸರ್ವೆ ನಂಃ 69-2ರ ಜಮೀನನ್ನು ನರಸಿಂಹಯ್ಯ ಎಂಬುವವರಿಗೆ ಮಾರಾಟ ಮಾಡಿದ್ದಾರೆ ಸದರಿ ನರಸಿಂಹಯ್ಯ ಸದರಿ ಆಸ್ತಿಯನ್ನು ಪಾಪಣ್ಣ ಎಂಬುವವರಿಗೆ ಮಾರಾಟ ಮಾಡಿರುತ್ತಾರೆ, ಸದರಿ ಪಾಪಣ್ಣ ಸದರಿ ಆಸ್ತಿಯನ್ನು ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂಬುದು ಗೊತ್ತಾಗಿರುತ್ತದೆ, ನಿಡಿ 1ರಲ್ಲಿ ಕಂಡ ಚೆಕ್ಕು ಬಂದಿ ಹಾಗೂ ವಿಭಾಗ ಪತ್ರದಲ್ಲಿ ಕಂಡ ಚೆಕ್ಕು ಬಂದಿ ಒಂದೇ ಆಗಿರುತ್ತದೆ ಅಂದರೆ ಸರಿಯಲ್ಲ, ಅದೇ ಚೆಕ್ಕು ಬಂದಿಯನ್ನು ಬರೆದು ನನ್ನ ತಂದೆ ನರಸಿಂಹಯ್ಯರವರಿಗೆ ಮಾರಾಟ ಮಾಡಿದ್ದರು ಅಂದರೆ ತಪ್ಪು ಚೆಕ್ಕು ಬಂದಿ ಆಗಿರುತ್ತದೆ, ಈ ಹಂತದಲ್ಲಿ ಪಾಟೀ ಸವಾಲು ಮುಂದುವರೆಸಲು ಕಾಲವಕಾಶ ಕೋರಿದ್ದಾರೆ ನೀಡಲಾಗಿದೆ.

(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಓ

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,
ಮಾಗಡಿ.